**ವ್ಯಾಖ್ಯಾನ**

# ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ

**Ref.**: Dasara Maatina Sobagu, by Dr. Vijayendra R Desai, page No. 291.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ
ಗೋಪೀಜನಪ್ರಿಯ ಗೋಪಾಲಗಲ್ಲದಲೆ || ಪ ||

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ |
ಸಿರಿಯತನದಲಿ ನೋಡೆ ಶ್ರೀಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವುತನದಲಿ ನೋಡೆ ಜಗದಾದಿ ಗುರುವು || 1 ||

ಪಾವನತ್ವದಿ ನೋಡೆ ಅಮರಗಂಗಾ ಜನಕ
ದೇವತ್ವದಲಿ ನೋಡೆ ದಿವಿಜರೊಡೆಯ |
ಲಾವಣ್ಯದಲಿ ನೋಡೆ ಲೋಕ ಮೋಹಕನಯ್ಯ
ಆವ ಧೈರ್ಯದಿ ನೋಡೆ ಅಸುರಾಂತಕ || 2 ||

ಗಗನದಲಿ ಸಂಚರಿಪ ಗರುಡದೇವನೆ ತುರುಗ
ಜಗತೀಧರ ಶೇಷ ಪರ್ಯಂಕ ಶಯನ |
ನಿಗಮಗೋಚರ ಪುರಂದರವಿಠ್ಠಲನಿಗಲ್ಲದಲೆ
ಮಿಕ್ಕಾವ ದೈವಗಳಿಗುಂಟೇ ಈ ಭಾಗ್ಯವುಂಟೇ || 3 ||

**ಸರ್ವೋತ್ತಮನ ಸೊಬಗಿನ ಪರಿ**

ಇದು ಪುರುಂದರದಾಸರ ಪ್ರಸಿದ್ಧ ದೇವರ ನಾಮ. ಜನಪ್ರಿಯ ಹಾಡು. ಇದು ದೇವರ ಸೊಬಗಿನ ಸ್ತುತಿ. ದೇವರ ವೈಭವದ ವರ್ಣನೆ. ಸರ್ವೋತ್ತಮತೆ ಸಾರುವ ಸಾರ. ನಮ್ಮ ದೇವರ ಹೆಗ್ಗಳಿಕೆಯ ಪದ.

ಈತನ ಐಸಿರಿ ನೋಡಿ. ಗುಣ ಸಿರಿ ನೋಡಿ. ತನು ಸಿರಿ ನೋಡಿ. ಬಲಸಿರಿ ನೋಡಿ. ದೊರೆಸಿರಿ, ಹಿರಿಸಿರಿಗಳ ನೋಡಿ. ಚತುರದಶಲೋಕ ಹುಡುಕಾಡಿ. ಮತ್ತೆ ನೋಡಿ. ಸರಿ ದೊರೆ ದೊರೆಯನು. ಇದು ಇವನ ಮೋಡಿ.

ಮನದಲಿ ಮಾಧವನ ಮಹಿಮೆ, ಹೃದಯದಲಿ ಹರಿಭಕ್ತಿ, ವದನದಿ ವಿಠ್ಠಲನ ನಾಮ ದ್ವಾದಶನಾಮ ಧರಿಸಿದರು. ತಂಬೂರಿ ಮೀಟಿದರು. ತಾಳ ತಟ್ಟಿದರು. ಗೆಜ್ಜೆ ಕಟ್ಟಿ ಕುಣಿದರು.ಹರಿಯ ಸೊಬಗ ಕಂಡರು. ಇನ್ನಾರಲ್ಲಿ ಇಲ್ಲ ಎಂದರು. ಹೃದಯ ತುಂಬಿ ಹಾಡಿದರು. ಇಂಥ ಸೊಬಗು ಮತ್ತೊಬ್ಬನಲಿ ಸಿಕ್ಕೀತೇ? ದಾಸವರೇಣ್ಯರ ಮಾತು.

**ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ**
**ಗೋಪೀಜನಪ್ರಿಯ ಗೋಪಾಲಗಲ್ಲದಲೆ ||**

ಹೊರ ಅರ್ಥ ವಿದಿತ. ಅಂತರಾಳ ಹುಡುಕೋಣ. ಪರಮಾತ್ಮನ ಮಹಾತ್ಮೆಯ ಸೊಬಗು. ಮತ್ತೆ ಪರಮಾತ್ಮನ ಸೊಬಗಿನ ಮಹಾತ್ಮೆ. ಬಣ್ಣಿಸಲಳವಲ್ಲದ ಪರಿ. ಈ ಪರಿ.
ಇಂಥ ಮಹಾತ್ಮೆ ಯಾರಲ್ಲಿ ಕಾಣುವದು? ಬೇರಾರಲ್ಲೂ ಇಲ್ಲ.

**ಗೋಪಿಜನಪ್ರಿಯ ಗೋಪಾಲಗಲ್ಲದಲೆ**

ಗೋ ಪ್ರಿಯ. ಗೋಪಿಯರ ಪ್ರಿಯ. ಸುಜನ ಪ್ರಿಯ. ಗೋಪಿಜನ ಅಂದರೆ ಗೋಕುಲ ವಾಸಿಗಳ ಪ್ರಿಯ.
ಹೀಗೆ ಸರ್ವರಿಗೆ ಪ್ರಿಯ, ಸರ್ವರು ಈತನಿಗೆ ಪ್ರಿಯ.
ಗೋ ಪಾಲ -
ಗೋ ಅಂದರೆ ಆಕಳು. ಆಕಳುಗಳ ಯೋಗಕ್ಷೇಮಂ ವಹಾಮ್ಯಹಂ.
ಗೋ ಅಂದರೆ ವೇದಗಳು. ವೇದಗಳಿಂದ ಪಾಲಿತ = ವೇದ ಪ್ರತಿಪಾದ್ಯ. ಸದಾಗಮೈಕವೇದ್ಯ.
ಮತ್ತೆ ವೇದಗಳ ಪಾಲನ ಕರ್ತಾ. ಪ್ರಳಯದಲ್ಲಿ ತನ್ನ ಬುದ್ದಿಸ್ಥ ಮಾಡಿ ಮುಂದೆ ಮುಂದಿನ ಯುಗದಲ್ಲಿ ಮುಂದುವರಿಸುವವ.
ಗೋ ಅಂದರೆ ಭೂಮಿ. ಭೂ ಪಾಲ. ಇಂಥ ಗೋಪಾಲ, ಮುದ್ದು ಕೃಷ್ಣನಲ್ಲಿ ಅಲ್ಲದೇ ಮತ್ತಾರಲ್ಲಿ ಈ ಸೊಬಗು ನಾ ಕಾಣೆ ಎಂದರು ಜ್ಞಾನಿವರೇಣ್ಯ ಪುರುಂದರ ದಾಸರು.

**ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ**

ಸಾಮಾನ್ಯ ದೊರೆಗಳ ಕಲ್ಪನೆ ದೂರ ಇಡಿ. ಅಂತಿಂಥ ದೊರೆ ಇವನಲ್ಲ. ಇಂದು ಇರುವ, ನಾಳೆ

ಇಲ್ಲದವ ಇವನಲ್ಲ. ಅನಾದಿ ಅನಂತ ಕಾಲದ ಸಾರ್ವಭೌಮ ಈತ. ಅಂದು, ಇಂದು ಮುಂದು ಎಂದೆಂದೂ ದೊರೆ ಈತ.

ಯಾಕೆ?

ಕಾಲದ ಪ್ರಭಾವ ಈತನ ಮೇಲೆ ಇಲ್ಲ. ಇವ ಕಾಲ ನಿಯಾಮಕನಲ್ಲವೇ. ಕಾಲಾತೀತ ದೊರೆ ಈತ. ಈತನ ದೇಶದ ಪರಿ ನೋಡಿ. ಪರಿಮಿತಿ ಇಲ್ಲದ ಈ ಪರಿ ಸೊಬಗ ನೋಡಿ. ಭೂ ಪತಿ ಈತ. ಧರಣಿಯ ರಮಣ. ಹದಿನಾಲ್ಕು ಲೋಕಗಳ ಬ್ರಹ್ಮಾಂಡದೊಡೆಯ. ಇಂಥ ಅನಂತ ಕೋಟಿ ಬ್ರಹ್ಮಾಂಡಗಳ ನಾಯಕ. ಬ್ರಹ್ಮಾಂಡದೊಳ ಹೊರಗೆ ಈತನಿಲ್ಲದ ಸ್ಥಳವಿಲ್ಲವೈ. ದೇಶಾತೀತ ದೊರೆ ಈತ. ಸರ್ವತ್ರ ವ್ಯಾಪ್ತನೀತ. ದೊರೆತನದ ಸಿರಿ ನೋಡಿ - ಬ್ರಹ್ಮಾದಿಗಳು ಈತನ ಆದೇಶ ಪಾಲಿಸಲು ವಿನೀತ, ಪುನೀತ, ಕಾತುರ. **'ತೇನ ವಿನಾ ತೃಣಮಪಿ ನ ಚಲತಿ|'** ಈತನ ಅಣತಿ ಇಲ್ಲದೇಬೊಮ್ಮ ನಿಶ್ಚಲ.

ಹುಲ್ಲುಕಡ್ಡಿಯೂ ಹೊಯ್ದಾಡಲಾರದು! ಇನ್ನು ಮಿಕ್ಕ ಜೀವಿಗಳ ಮಾತೇನು?

ಮುಕ್ತಾಮುಕ್ತ ನಿಯಾಮಕ. ಈತ ಸರ್ವತಂತ್ರ ಸ್ವತಂತ್ರ. ಸರ್ವರ ಸ್ವಾಮಿ.

**ಸಿರಿಯತನದಲಿ ನೋಡೆ ಶ್ರೀಕಾಂತನು**

ಜಗದ ಸಿರಿಯ ಒಡತಿ ಲಕ್ಷ್ಮೀ. ಈತ ಲಕ್ಷ್ಮೀ ಪತಿ. ಶ್ರೀ ರಮಣಿ ಕರಕಮಲ ಪೂಜಿತ ಚಾರು ಚರಣನೀತ. ಜಗದ ಸಂಪತ್ತು ಈತನ ಅನುಗ್ರಹ. ಒಟ್ಟು ಜಗದ ಸಂಪದ ಈತನ ಅನಂತ ಸೊತ್ತಿನ ಲವಲೇಶಕ್ಕೂ ಕಡಿಮೆ. ಪರಿ ಇಲ್ಲದ ಸಿರಿ ಸಂಪತ್ತಿನ ಕಾಂತ. ಶ್ರೀಕಾಂತ ನಮ್ಮ ಶ್ರೀ ಕೃಷ್ಣ. ಇದು ಹರಿಯ ವೈಬವ. ಸಾಟಿ ಇಲ್ಲದ ವೈಭವ ಸರ್ವೋತ್ತಮತೆಯ ಸಂಕೇತ.

ಮತ್ತೆ

ಸಮುದ್ರ ಮಂಥನ ಸಮಯ. ಲಕ್ಷ್ಮೀ ಉದ್ಭವ. ಎಲ್ಲರೂ ಶ್ರೀ ಯನ್ನು ಬಯಸಿದರು. ದೋಷಿಗಳೆಂದೆಲ್ಲರನ್ನು ನಿರಾಕರಿಸಿದಳು. ಶ್ರೀಹರಿ ನಿರ್ದೋಷನೆಂದಳು. ಗುಣಪೂರ್ಣನೆಂದಳು. ಸರ್ವೋತ್ತಮ, ಕಾಂತ, ನೆಂದು ಸ್ವೀಕರಿಸಿದಳು. ಇಂತು ಶ್ರೀಕಾಂತ.

**ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ**

ಪದ್ಮನಾಭನ ನಾಭಿಪದ್ಮದಲಿ ಹುಟ್ಟಿದ ಬ್ರಹ್ಮ. ಗರುಡ, ಶೇಷ, ರುದ್ರಾದಿಗಳು ಬ್ರಹ್ಮನ ಮಕ್ಕಳು. ಹರಿಯ ಮೊಮ್ಮಕ್ಕಳು. ಇಂದ್ರಾದಿ ಮುಂದಿನ ದೇವತೆಗಳು ಹರಿಯ ಗಿರಿಮೊಮ್ಮಕ್ಕಳಾದಿ.

ದಾಸರು ಮುಂದೆ ಹೇಳುತ್ತಾರೆ -

**ದೇವತ್ವದಲಿ ನೋಡೆ ದಿವಿಜರ ಒಡೆಯ**

ಎಲ್ಲ ದೇವತೆಗಳಿಗೆ ಒಡೆಯ. ಹೀಗೆ ಹಿರಿಯತನದಲಿ ಹರಿಗೆ ಎಲ್ಲರೂ ಕಿರಿಯರೇ. ಏನು ಹಿರಿತನ?

ಕಾಲೇನ ಮಾತ್ರ ಅಲ್ಲ. ಗುಣಪೂರ್ಣತ್ವದಲ್ಲಿ, ನಿರ್ದೋಷತ್ವದಲ್ಲಿ, ಪರಿಪೂರ್ಣ ಹಿರಿಯ ಶ್ರೀಹರಿ. ಅದಕ್ಕಾಗಿ ಆತ ಸರ್ವೋತ್ತಮ. ಹರಿಯ ಹಿರಿತನದಲ್ಲಿ ಸರ್ವೋತ್ತಮತೆ ಕಂಡರು ದಾಸರು.

**ಗುರುವುತನದಲಿ ನೋಡೆ ಜಗದಾದಿ ಗುರುವು || 1 ||**

ಜಗಕೆ ಶಾಸ್ತ್ರೋಪದೇಶಕ ಜಗದ್ಗುರು ಸರ್ವಜ್ಞ ಬ್ರಹ್ಮ. ಈತನ ಗುರು ಸರ್ವಜ್ಞತಮ ಸರ್ವಶ್ರೇಷ್ಠ ಪರಮಾತ್ಮ. ಬ್ರಹ್ಮಾದಿ ಸಕಲ ಶ್ರೇಷ್ಠ ಜ್ಞಾನಿಗಳು ಈ ಜ್ಞಾನಘನ ಮೂರ್ತಿಯ ಶಿಷ್ಯರು. ಹೀಗಾಗಿ ಈತ ಸರ್ವೋತ್ತಮ ಸರ್ವಜ್ಞ.
ಇನ್ನು
ಗುರು - ಶಿಷ್ಯರ ಸಂಬಂಧ ಎಂತು? ಗುರು ಈಶ. ಶಿಷ್ಯ ದಾಸ. ಸರ್ವೋತ್ತಮ ಪರಮಾತ್ಮ ಜಗದ ಈಶ. ಜಗದ ಜನವೆಲ್ಲ ಆತನ ದಾಸರು. ಹೀಗೆ ಈಶ-ದಾಸ ಭಾವನೆ ಇಲ್ಲಿ ದಾಸರಿಗೆ.

**ಪಾವನತ್ವದಿ ನೋಡೆ ಅಮರಗಂಗಾ ಜನಕ**

ಹರಿಯ ಹೆಬ್ಬೆರಳ ನಖ. ಅದರ ತುದಿ. ಅಲ್ಲಿ ಗಂಗೆಯ ಜನನ. ಆ ಜಲದಿ ಬ್ರಹ್ಮ ಹರಿಯ ಪಾದ ತೊಳೆದ. ಹರಿಪಾದ ಸ್ಪರ್ಶ. ಗಂಗೆಗೆ ಅಮರ ಪಾವನತ್ವ ಕೊಟ್ಟಿತು. ಅವಳು ಮುಟ್ಟಿದ್ದೆಲ್ಲ ಪವಿತ್ರವಾಯಿತು. ಪಾಪ ರಾಶಿ ಮಾಯ. ಪುಣ್ಯ ಪ್ರಾಪ್ತಿ. ಜಗಕೆ ಮಂಗಳೆ ಅವಳು. ಅವಳಿಗೂ ಜಗಕೂ ಮಂಗಳ ಜಗನ್ನಾಥ. ಮಂಗಳಕೆ ಮಂಗಳ. ಅತಿ ಮಂಗಳ. ಹರಿಯ ನಾಮವೇ ಪಾವನಕರ.
ಜಗದ, ಜನರ ಪಾಪ ಪರಿಹರಿಸುವವ ಇವ. ಪಾವಿತ್ರ್ಯ ಕೊಟ್ಟು ಉದ್ಧರಿಸುವವ ಇವ. ಅದಕ್ಕಾಗಿ ಈತ ಕರುಣಾಸಾಗರ ಎಂದರು ದಾಸರು.

**ಲಾವಣ್ಯದಲಿ ನೋಡೆ ಲೋಕ ಮೋಹಕನಯ್ಯ.**

ಲೋಕ ಮೋಹಕ ಸೌಂದಯ ಮನ್ಮಥನದು. ಶ್ರೀ ಹರಿ ಅವನ ಅಪ್ಪ. ಅವನಿಗಷ್ಟೇ ಅಲ್ಲ. ಜಗಕೆಲ್ಲ ಕೊಟ್ಟ ಲಾವಣ್ಯ ಹರಿಯದು.
ಯಾಕೆ?
ಜಗದ ಅಪ್ಪ ಈತ. ಲಾವಣ್ಯ ಘನವೆತ್ತ ಮೂರ್ತಿ ಈತ. ಬಾಹ್ಯ ಲಾವಣ್ಯ ಅಷ್ಟೇ ಅಲ್ಲ. ಗುಣ ಪೂರ್ಣ ಲಾವಣ್ಯ ಘನ ಮೂರ್ತಿ. ಸೌಂದರ್ಯದಲ್ಲೂ ಸರ್ವೋತ್ತಮ ಎಂದರು ದಾಸರು.

**ಆವ ಧೈರ್ಯದಿ ನೋಡೆ ಅಸುರಾಂತಕ || 2 ||**

ಅಸುರರ ಅಂತ ಮಾಡಿ ಮಾಡಿ, ಅದನ್ನು ಹಾಡಿ, ಹಾಡಿ ಪರಮಾತ್ಮನ ಹೆಸರೇ 'ಅಸುರಾಂತಕ' ಎಂದೆನಿಸಿತು. ಯೌಗಿಕ ನಾಮವಾಯಿತು. ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ
ಅಧರ್ಮ ನಾಶ, ಧರ್ಮ ಸ್ಥಾಪನೆ. ಇದಕ್ಕಾಗಿ ಯುಗೇ ಯುಗೇ ಸಂಭವಾಮಿ. ಕೃಷ್ಣನ ಮಾತು.
ದೈತ್ಯರ ಸಾಲು ಸಾಲು. ಹರಿಯಿಂದ ಲೀಲೆಯಲಿ ಸಂಹರಿತ. ಇದಿರು ನಿಲ್ಲುವವರಿಲ್ಲ.
ಇದು ಅವನ ಅಪ್ರತಿಮ ಸಾಮರ್ಥ್ಯ. ಅಪಾರ ಅದ್ವಿತೀಯ ಬಲ.

'ಅಸುರಾಂತಕ' ಮತ್ತೂ ಒಂದರ್ಥ ಎಂದರು ದಾಸರು. ಏನದು? --
ಅಸುರ ಅಜ್ಞಾನದ ಸಂಕೇತ. ಅಜ್ಞಾನ ನಿವಾರಕ ಸುಜ್ಞಾನ ಪ್ರದಾಯಕ. ನಮ್ಮ ಹರಿ ಸುಖ ದಾಯಕ - ಎಂದರು ಹರಿದಾಸರು.

**ಗಗನದಲಿ ಸಂಚರಿಪ ಗರುಡದೇವನೆ ತುರುಗ**
**ಜಗತೀಧರ ಶೇಷ ಪರ್ಯಂಕ ಶಯನ|**

ವಾಹನ ವೈಭವದ ಪ್ರತೀಕ. ಗರುಡದೇವನೇ ವಿಷ್ಣುವಿನ ಕುದುರೆ ಎಂದರೆ ವಾಹನ. ಮನೋ ವೇಗ.
ವಿಷ್ಣು 'ವಾಯು ವಾಹನ'ನೂ ಹೌದು. ಜೀವಿಯ ಶರೀರದಲ್ಲಿ ದೇವರು ವಾಯುವಾಹನ.
ಹನುಮಂತದೇವರು ರಾಮ ಲಕ್ಷ್ಮಣರನ್ನು ಹೆಗಲ ಮೇಲೆ ಹೊತ್ತು ಒಯ್ದದ್ದೂ ಉಂಟು. ಮತ್ತೊಂದು ದೈವಕ್ಕಿಲ್ಲ ಇಂಥ ವಾಹನ.

ಸಾವಿರ ಹೆಡೆಗಳು. ಒಂದು ಹೆಡೆಯ ಮೇಲೆ ಬ್ರಹ್ಮಾಂಡ. ಸಾಸಿವೆ ಕಾಳಿನಂತೆ. ಹೊತ್ತಿದ್ದಾರೆ ಶೇಷದೇವರು. ಈ ಮಹಾನ್ ಶೇಷದೇವರೇ ವಿಷ್ಣುವಿನ ಶಯನ, ಮಂಚ. ಎರಡೂ ಹೌದು. ಇದು ಏನು ವೈಭವ! ಅನ್ಯರಿಗೆ ಇಲ್ಲದ್ದು.

ಇನ್ನೊಂದು ಅರ್ಥ –

ಗರುಡ ಕಾಲಾಭಿಮಾನಿ. ವಾಹನ ಮಾಲೀಕನ ಅಧೀನ. ಗರುಡ ಅಂದರೆ ಕಾಲ.
ಕಾಲ ಹರಿಯ ಅಧೀನ. ಆತ ಕಾಲ ನಾಮಕ.ನಕಾಲಾಂತರ್ಯಾಮಿ. ಕಾಲ ಪ್ರವರ್ತಕ. ನಿವರ್ತಕ. ನಿಯಾಮಕ. ಮತ್ತೆ
ಕೃಷ್ಣ ರಥ ಗರುಡ ಧ್ವಜನೂ ಹೌದು. ಗರುಡಧ್ವಜ ಬಂದರೆ ಕೃಷ್ಣ ಬಂದಂತೆ. ನಮಗೆ ವಿಷ್ಣುವನ್ನು ಕರೆತರುವವ ಗರುಡ.
ಮತ್ತೆ ಗರುಡ ವೇದಾಭಿಮಾನಿ.
ವೇದವಿದ್ಯೆ ತಂದುಕೊಡುವವ ಗರುಡ. ವೇದ ಬಂದರೆ ವೇದವೇದ್ಯ ಶ್ರೀ ಹರಿ ಬಂದಂತೆ.
ಇನ್ನು ಶೇಷದೇವ ಜೀವರ ಅಭಿಮಾನಿ. ಹರಿ ಶೇಷಶಯನ. ಅರ್ಥ ಜೀವರು ಹರಿಯ ಅಧೀನ.

ಆತ್ಮ ಅವರ. ಪರಮಾತ್ಮ ಪರಮ.  ಮುಖ್ಯತಃ ಪರಮಾತ್ಮ ಸರ್ವ ಜೀವ ನಿಯಾಮಕ.
ಶೇಷ ಮನೋಭಿಮಾನಿಯೂ ಹೌದು.  ನಮ್ಮ ಮನವನ್ನು ಹರಿಯ ಶಯನ ಮಾಡಿಕೊಡುತ್ತಾನೆ.
ಅರ್ಥ -ಮನದಲ್ಲಿ ಹರಿಯನ್ನು ಭದ್ರ ನೆಲೆ ಊರಿಸುತ್ತಾನೆ.
ಮತ್ತೇನು ಬೇಕು

**ನಿಗಮಗೋಚರ ನಮ್ಮ ಪುರಂದರವಿಠ್ಠಲನಿಗಲ್ಲದಲೆ**
**ಮಿಕ್ಕಾವ ದೈವಗಳಿಗುಂಟೇ ಈ ಭಾಗ್ಯ   || 3 ||**

ನಿಗಮ ಗೋಚರ - ನಿಗಮ – ಆಗಮಗಳಿಂದ ಗೋಚರ - ತಿಳಿಯಲ್ಪಡುವವನು.
ಅರ್ಥ –
**'ಶಾಸ್ತ್ರ ಯೋನಿತ್ವಾತ್'** ಪರಮಾತ್ಮ ವೇದ ಶಾಸ್ತ್ರಗಳಿಂದಲೇ ತಿಳಿಯಲ್ಪಡುತ್ತಾನೆ. ಅನ್ಯಕ್ಕೆ ಅಗೋಚರ.  ಈ ಎಲ್ಲ ದೊರೆತನ, ಹಿರಿತನ, ಸಿರಿತನ, ಗುರುತನ, ಗುಣತನ, ಒಡೆತನ, ಲಾವಣ್ಯ, ಪಾವಿತ್ರ್ಯ, ಧೈರ್ಯ ಸ್ಥೈರ್ಯ ಇವುಗಳಲ್ಲಿ ಪರಮತೆ ನಮ್ಮ ಪರಮಾತ್ಮ- ಪುರುಂದರ ವಿಠ್ಠಲನಿಗೇ ಉಂಟು. ಮಿಕ್ಕವರಿಗಿಲ್ಲ ಅನ್ನುತ್ತಾರೆ ದಾಸಶ್ರೇಷ್ಠ ಪುರುಂದರದಾಸರು. ದಾಸರ ಅಂತರ್ಗತ ಮುಖ್ಯ ಪ್ರಾಣಾಂತರ್ಗತ

ಲಕ್ಷ್ಮೀ ನರಸಿಂಹ ದೇವರಿಗೆ ನಮೋ ನಮಃ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ